ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
**ಸಿ.ಸಿ.ನಂ. 9150-2021**

ಪಿಡಬ್ಲೂಃ 1 ಸಿಡಬ್ಲೂ ಃ 1
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 08-07-2025

ಹೆಸರು ಃ ಬಸವಚಾರಿ
ತಂದೆ ಹೆಸರು ಃ ಸುಬ್ರಮಣ್ಯ ಚಾರಿ
ವಯಸ್ಸು ಃ 43
ಉದ್ಯೋಗ ಃ ವ್ಯಾಪಾರ
ವಾಸ ಃ ಐಬಸಾಪುರ

ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ

ಚಾಸಾ-2 ಮತ್ತು ಚಾಸಾ-3 ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನಾನು ನೋಡಿದ್ದೇನೆ. ದಿ.25-07-2021 ರಂದು ಮಧ್ಯಾಹ್ನ 11.30 ರಿಂದ 12.00 ಗಂಟೆ ಸಮಯದಲ್ಲಿ ನಾನು ಚನ್ನರಾಯಪಟ್ಟಣದಿಂದ ಐಬಸಾಪುರಕ್ಕೆ ಹೋಗುತ್ತಿದ್ದಾಗ ಸೇತುವೆಯ ಬಳಿ ಕರುಗಳನ್ನು ಒಂದು ದ್ವಿ ಚಕ್ರ ವಾಹನದಲ್ಲಿ ಮತ್ತು ಮತ್ತೊಂದು ದ್ವಿ ಚಕ್ರ ವಾಹನದಲ್ಲಿ ತಲಾ ಒಂದೊಂದು ವಾಹನದಲ್ಲಿ ಎರಡು ಕರುಗಳನ್ನು ಸಾಗಿಸಿಕೊಂಡು ಬರುತ್ತಿದ್ದರು, ನಾನು ಅವರನ್ನು ತಡೆದು ಕೇಳಿದಾಗ, ನನ್ನನ್ನು ಉದ್ದೇಶಿಸಿ ನೀವ್ಯಾರು ಕೇಳಲು ಎಂದು ಕೈಯಿಂದ ಹಲ್ಲೆ ಮಾಡಿದರು. ಆಗ ನಮ್ಮ ಊರಿನವರಾದ ಚಾಸಾ-2 ಮತ್ತು ಚಾಸಾ-3 ರವರು ಬಂದು ಜಗಳ ಬಿಡಿಸಿದರು. ಈ ಸಂಬಂಧ ನಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ಕರುಗಳನ್ನು ಆರೋಪಿತರು ಕಸಾಯಿ ಖಾನೆಗೆ ಕಡಿಯಲು ತೆಗೆದುಕೊಂಡು ಹೋಗುತ್ತಿದ್ದರು. ಸಾಕ್ಷಿ ದೂರನ್ನು ನೋಡಿ ತಮ್ಮ ಸಹಿಯನುನ ಗುರುತಿಸಿರುತ್ತಾರೆ, ದೂರನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ನಾನು ದೇವನಹಳ್ಳಿ

ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡೆನು. ನಂತರ ಪೋಲಿಸೇರು ಕರುಗಳನ್ನು ನನ್ನ ಮೂಲಕ ಬಾಗೇಪಲ್ಲಿಯ ಬಳಿ ಇರುವ ಗೋಶಾಲೆಗೆ ಕಳುಹಿಸಿದರು.

2. ಸಾಕ್ಷಿ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರ್ ನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಮ್ಮ ಊರಿನ ಸೇತುವೆ ಬಳಿ ಪೋಲೀಸರು ಮಹಜರ್ ಮಾಡಿದಾಗ ಮಾಡಿರುತ್ತೇನೆ. ಮಹಜರ್ ನ್ನು ದಿ.26-07-2021 ರ ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಪೋಲೀಸರು ಮಾಡಿರುತ್ತಾರೆ. ನಿಪಿ-2 ಮಹಜರ್ ಸಮಯದಲ್ಲಿ ನಮ್ಮ ಊರಿನ ಚಾಸಾ-5 ಮತ್ತು ಚಾಸಾ-6 ಸ್ಥಳದಲ್ಲಿ ಇದ್ದರು. ಸಾಕ್ಷಿ ಕಡತದಲ್ಲಿರುವ ಕರುಗಳ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು  ಹಾಗೂ ಸ್ಥಳದ ಛಾಯಾ ಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿರುವ ವಿಚಾರ ನನಗೆ ಗೊತ್ತು. ಈ ಸಂಬಂಧ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಕೋರಿದ್ದು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಭಾಗಶಃ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಎಪಿಪಿರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ

3. ದಿ.25-07-2021 ರ ಮಧ್ಯಾಹ್ನ 12.00 ಗಂಟೆಗೆ ಈ ಘಟನೆ ನಡೆಯಿತು ಎಂದರೆ ಸರಿ. ಅ ದಿನ ನಾನು ಕೆಎ-43-7431 ಬಲೋರೋ ಗೂಡ್ಸ್ ವಾಹನದಲ್ಲಿ ಕೂಲಿ ಕಾರ್ಮಿಕರನ್ನು ಕರೆದುಕೊಂಡು ಚನ್ನರಾಯಪಟ್ಟಣದಿಂದ ಐಬಸಾಪುರಕ್ಕೆ ಹೋಗುತ್ತಿದ್ದೆ

ಎಂದರೆ ಸರಿ. ಆರೋಪಿಗಳು ಬರುತ್ತಿದ್ದ ವಾಹನದ ಸಂ. ಕೆಎ-04-ಜೆಯು-2905 ಹೋಂಡಾ ಡಿಯೋ ಆಕ್ಸಿಸ್ ವಾಹನ ಎಂದರೆ ಸರಿ. ಸದರಿ ವಾಹನದಲ್ಲಿ ಎರಡು ಗಂಡು ಕರುಗಳನ್ನು ಚೀಲದಲ್ಲಿ ಹಾಕಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ಸದರಿ ವಾಹನ ಚಾಲನೆ ಮಾಡುತ್ತಿದ್ದ ವ್ಯಕ್ತಿಯ ಹೆಸರು ಕೇಳಲಾಗಿ ಶಾಹಿಕ್ ಶೂನ್ ಎಂದು ತಿಳಿಸಿದ ಎಂದರೆ ಸರಿ. ಮತ್ತೊಂದು ಕೆಎ-53-ಹೆಚ್-ಬಿ-2019 ಡಿಯೋ ಆರ್ ಎಕ್ಸ್ ವಾಹನ ಆಗಿತ್ತು ಎಂದರೆ ಸರಿ. ಸದರಿ ವಾಹನದಲ್ಲಿ ಎರಡು ಗಂಡು ಕರುಗಳನ್ನು ಚೀಲದಲ್ಲಿ ಹಾಕಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ಸದರಿ ವಾಹನ ಚಾಲನೆ ಮಾಡುತ್ತಿದ್ದ ವ್ಯಕ್ತಿಯ ಹೆಸರು ಕೇಳಲಾಗಿ ಸಾದಿಕ್ ಬೇಗ್ ಎಂದು ತಿಳಿಸಿದ ಎಂದರೆ ಸರಿ. ಆ ದಿನ ಆರೋಪಿಗಳಿಬ್ಬರು ಕೈಯಿಂದ ಹಲ್ಲೆ ಮಾಡಿದರು ಎಂದರೆ ಸರಿ. ನಿಪಿ-2 ಮಹಜರ್ ಮಾಡಿದಾಗ ಚಾಸಾ-5 ಮತ್ತು ಚಾಸಾ-7 ಇದ್ದರು, ಆಗ ಸಮಯ ಬೆಳಗ್ಗೆ 11.00 ರಿಂದ 11.45 ಗಂಟೆ ಆಗಿತ್ತು ಎಂದರೆ ಸರಿ.

<u>(ಆರೋಪಿ ಪರ ವಕೀಲರಿಂದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು)</u>

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ